# ವಲಸಿಗರು

ಪ್ರತಿದಿನವೂ ಅಗ್ನಿಪರೀಕ್ಷೆಯ ದೀಕ್ಷಾ ಸ್ನಾನ
ತೀವ್ರ ತನಿಖಾವರದಿಗಳು
ಮತ್ತು ಉಸಿರುಗಟ್ಟಿಸುವ ಫಲಿತಾಂಶಗಳು

ನೀವು ಉರಿದುಹೋಗುತ್ತೀರಿ
ಎಂದಿಗೂ ಮುಗಿಯದ ಪಾಠ ಪ್ರವಚನಗಳಲ್ಲಿ
ದಯ ದಾಕ್ಷಿಣ್ಯವಿಲ್ಲದ ದಿಗಿಲಿನಲ್ಲಿ

ನಿಮ್ಮ ಭಯವೆಂದರೆ
ನಿಮ್ಮದಲ್ಲದ ವ್ಯಾಪ್ತಿ ಪ್ರದೇಶದಲ್ಲಿ
ಸದಾ ಹೊಸಬರಾಗಿಯೇ
ಉಳಿದು ಬಿಡುವುದು

# ಅಡ್ಡಕಸ್ಬಿ

ಪವಿತ್ರ ಜಲವೆಂಬಂತೆ
ಪ್ರತಿ ದಿನ ಸಿಂಪಡಿಸಿ
ಮೈ ಮನಕೆ ಬೆಂಕಿಯನು
ಉಸಿರುಕಲ್ಲಾದ ಮೇಲೆಯೇ
ವಿಚಾರಣೆ ಶುರು

ಸುಟ್ಟುಕೊಳ್ಳುವೆ ನೀನಾಗ
ಎಂದೂ ಮುಗಿಯದ ಪಾಠ ಪ್ರವಚನಗಳಲ್ಲಿ
ಮರುಕವಿರದ ಆತ್ಯಂತಿಕ ಭಯದಲ್ಲಿ

ನಿನ್ನ ಆತಂಕವೆಂದರೆ
ಅದು ಇನ್ನೊಬ್ಬರ ವ್ಯಾಪ್ತಿಗೆ ಒಳಪಟ್ಟ
ಪ್ರದೇಶ
ಮತ್ತೆ ನೀನಲ್ಲಿ
ಅಡ್ಡಕಸ್ಬಿಯಾಗೇ ಉಳಿಯಬೇಕಲ್ಲ
ಎಂಬುದು

# ಅನಾಮಿಕ

ನೀನು ಮರೆತುಬಿಟ್ಟೆ
ಅನುವಂಶಿಕ ಕುಲ ಚಿಹ್ನೆಗಳ
ಮಗುಚಿ ಬೀಳುತ್ತಿರುವ ಸಾಮ್ರಾಜ್ಯದ
ಪಾಳು ಮಣ್ಣಿನ ಮೇಲೆ
ಮೊದಲ ಸಲ ಹೆಜ್ಜೆಗಳನ್ನೂರಿದಾಗ

ಮತ್ತೆಂದೂ ನೀನು
ನಿನ್ನ ಮಾಂತ್ರಿಕ ಕಣ್ಣುಗಳನೆತ್ತಿ ನೋಡಲೇ ಇಲ್ಲ
ಆಗಸವ ಬೇಡಿಕೊಳ್ಳುವಂತೆ

ಮಣ್ಣು ಮಾಂಸ ತುಂಬಿದ ನೀನು
ಜಾರಿಕೊಂಡಿರುವೆ
ನಿನ್ನ ಊಹೆಗೂ ನಿಲುಕದ
ಸತತ ಗುಳೆ ಹೋಗುವ
ವಲಸಿಗ ನಕ್ಷತ್ರಗಳ ಚಹರೆ ಪಟ್ಟಿಯಿಂದ

ಹಳೆಮತ ಕುಸಿದು ಹುಡಿ ಪುಡಿಯಾಗಿದೆ
ಮತ್ತೆ ಇನ್ನೆಂದೂ ನಿನ್ನ ಸಭ್ಯತೆಯ
ಉಸಿರು ಒಡಕಿಲ್ಲದೆ ಕಿವಿಗೆ ಬೀಳಲೇ ಇಲ್ಲ

ಈ ಮಧು ಮಹೋತ್ಸವದಲೂ
ದ್ವಿಗುಣಗೊಂಡಿವೆ
ನಿನ್ನ ಗಾಯದ ಗುರುತು
ತನ್ನ ಕಣ್ಣೀರು ಮರೆತು

ನೀನು ದುಂಬಾಲು ಬಿದ್ದಿರುವೆ
ದಾರಿಗಾಣದೆ ದಾರಿತೋರುವ
ಗುಂಪುಗಾರಿಕೆ
ಮೈಕಿನ ಮಾತುಗಳ ಹಿಂದೆ

ನಾಮವಿದ್ದೂ
ನೀನೀಗ ಅನಾಮಿಕ

